All India Radio: Bangalore
National Bulletin In Kannada
19.05.2025 : 13.10hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

19.05.2025 : 13.10hrs

ಮುಖ್ಯಾಂಶಗಳು:

1. **ದೇಶಾದ್ಯಂತ ಇದೇ ೨೯ ರಿಂದ ವಿಕಸಿತ ಕೃಷಿ ಸಂಕಲ್ಪ ಅಭಿಯಾನ**
2. **ವಿದೇಶಾಂಗ ಸಚಿವರ ನೆದರ್‌ಲ್ಯಾಂಡ್ಸ್, ಡೆನ್ಮಾರ್ಕ್ ಮತ್ತು ಜರ್ಮನಿ ಪ್ರವಾಸ ; ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಚರ್ಚೆ**
3. **ಅಮೆರಿಕದ ಡಾಲರ್ ಎದುರು ೧೨ ಪೈಸೆ ಬಲಗೊಂಡ ಭಾರತದ ರೂಪಾಯಿ ಮೌಲ್ಯ**
4. **ಏಷ್ಯಾಕಪ್ ನಿಂದ ಹಿಂದೆ ಸರಿದ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ**

*************

ದೇಶಾದ್ಯಂತ ವಿಕಸಿತ ಕೃಷಿ ಸಂಕಲ್ಪ ಅಭಿಯಾನವನ್ನು ಇದೇ ತಿಂಗಳ ೨೯ ರಿಂದ ಜೂನ್ ೧೨ರವರೆಗೆ ಹಮ್ಮಿಕೊಳ್ಳಲಾಗುವುದು ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌವ್ಹಾಣ್ ಹೇಳಿದ್ದಾರೆ. ಆಧುನಿಕ ತಂತ್ರಜ್ಞಾನ ಮತ್ತು ಹೊಸ ತಳಿಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವುದು ಈ ಅಭಿಯಾನದ ಗುರಿಯಾಗಿದೆ. ನವದೆಹಲಿಯಲ್ಲಿ ಇಂದು ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಅಭಿಯಾನವು ದೇಶಾದ್ಯಂತ ೭೨೩ ಜಿಲ್ಲೆಗಳಲ್ಲಿ ನಡೆಯಲಿದ್ದು, ಸುಮಾರು ೧.೫ ಕೋಟಿ ರೈತರನ್ನು ತಲುಪಲಿದೆ. ಪ್ರಾಯೋಗಿಕ ಮತ್ತು ವೈಜ್ಞಾನಿಕ ಕೃಷಿ ತಂತ್ರಗಳಲ್ಲಿ ರೈತರಿಗೆ ತರಬೇತಿ ನೀಡಲು ತಜ್ಞರ ತಂಡವು ಸುಮಾರು ೬೫ ಸಾವಿರ ಹಳ್ಳಿಗಳಿಗೆ ಭೇಟಿ ನೀಡಲಿದ್ದು, ಪ್ರತಿ ತಂಡವು ಪ್ರತಿದಿನ ಜಿಲ್ಲಾಮಟ್ಟದಲ್ಲಿ ಮೂರು ಸಭೆಗಳನ್ನು ನಡೆಸಲಿದೆ ಎಂದು ಸಚಿವ ಶಿವರಾಜ್ ಸಿಂಗ್ ಚೌವ್ಹಾಣ್ ಮಾಹಿತಿ ನೀಡಿದರು. ಕೃಷಿಯು ಭಾರತೀಯ ಆರ್ಥಿಕತೆಯ ಬೆನ್ನೆಲುಬಾಗಿ ಉಳಿದಿದೆ. ಇದು ಸುಮಾರು ಅರ್ಧದಷ್ಟು ಜನಸಂಖ್ಯೆಗೆ ಜೀವನೋಪಾಯ ಒದಗಿಸುವ

ಮೂಲಕ ದೇಶದ ಆಹಾರ ಭದ್ರತೆಯ ಅಡಿಪಾಯವನ್ನು ರೂಪಿಸುತ್ತದೆ. ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಸ್ಥಿರವಾಗಿ ಹೆಚ್ಚುತ್ತಿದೆ ಎಂದು ಅವರು ಅಂಕಿ-ಅಂಶಗಳ ಸಹಿತ ವಿವರಿಸಿದರು.

ಧ್ವನಿ : ಶಿವರಾಜ್ ಸಿಂಗ್ ಚೌವ್ಹಾಣ್ (೨೭ ಸೆಕೆಂಡ್‌ಗಳು)

*************

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಇಂದಿನಿಂದ ಆರು ದಿನಗಳ ಕಾಲ ನೆದರ್‌ಲ್ಯಾಂಡ್ಸ್, ಡೆನ್ಮಾರ್ಕ್ ಮತ್ತು ಜರ್ಮನಿಗೆ ಪ್ರವಾಸ ಕೈಗೊಂಡಿದ್ದಾರೆ. ಈ ವೇಳೆ ಮೂರು ದೇಶಗಳ ನಾಯಕರನ್ನು ಜೈಶಂಕರ್ ಭೇಟಿ ಮಾಡಲಿದ್ದಾರೆ. ಈ ಭೇಟಿಯ ಸಮಯದಲ್ಲಿ ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ವ್ಯಾಪ್ತಿ ಮತ್ತು ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ತಮ್ಮ ಸಹವರ್ತಿಗಳೊಂದಿಗೆ ಅವರು ಚರ್ಚಿಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರ ಸಚಿವಾಲಯ ತಿಳಿಸಿದೆ. ಪ್ರವಾಸದ ವೇಳೆ ಕಾರ್ಯತಂತ್ರದ ಸಂಬಂಧಗಳನ್ನು ಗಾಢವಾಗಿಸುವ ಮತ್ತು ಪ್ರಮುಖ ಯೂರೋಪಿಯನ್ ಪಾಲುದಾರರೊಂದಿಗೆ ಸಹಕಾರವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಭಾರತದ ರಾಜತಾಂತ್ರಿಕ ನಡೆಯ ಭಾಗವಾಗಿದೆ. ಇದು ಕಾರ್ಯತಂತ್ರದ ಪಾಲುದಾರಿಕೆಗಳು ವ್ಯಾಪಾರ, ಹೂಡಿಕೆ ಮತ್ತು ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ.

*************

ಜಾಗತಿಕ ಅನಿಶ್ಚಿತ ಆರ್ಥಿಕ ಬೆಳವಣಿಗೆಗಳು ಮತ್ತು ಮಾರುಕಟ್ಟೆಯ ಪ್ರತಿಕ್ರಿಯೆಗಳ ಹಿನ್ನೆಲೆಯಲ್ಲಿ, ಸೋಮವಾರ ಅಮೆರಿಕದ ಡಾಲರ್ ಎದುರು ಭಾರತದ ರೂಪಾಯಿ ೧೨ ಪೈಸೆ ಬಲಗೊಂಡು ೮೫.೪೪ ಕ್ಕೆ ವಹಿವಾಟು ಆರಂಭಿಸಿದೆ. ಶುಕ್ರವಾರ ಭಾರತದ ರೂಪಾಯಿ ಡಾಲರ್ ಎದುರು ೮೫.೫೬ ಕ್ಕೆ ವಹಿವಾಟು ಮುಕ್ತಾಯವಾಗಿದೆ. ಏತನ್ಮಧ್ಯೆ, ದುರ್ಬಲಗೊಳ್ಳುತ್ತಿರುವ ಡಾಲರ್ ಮತ್ತು ಡೊನಾಲ್ಡ್ ಟ್ರಂಪ್ ಯುಗದ ವ್ಯಾಪಾರ ಸುಂಕಗಳ ಹೊಸ ಅನಿಶ್ಚಿತತೆಯ ನಡುವೆಯೂ, ಸೋಮವಾರ ದೇಶೀಯ ಭವಿಷ್ಯದ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಗಳು ಸುಮಾರು ೧ ಪ್ರತಿಶತದಷ್ಟು ಏರಿಕೆಯಾಗಿವೆ. ಜೂನ್ ೫ ರ ಎಂಸಿಎಕ್ಸ್ ಚಿನ್ನದ ಒಪ್ಪಂದವು ಬೆಳಗಿನ ವಹಿವಾಟಿನಲ್ಲಿ ೧೦ ಗ್ರಾಂಗೆ

೦.೯೫ ಪ್ರತಿಶತದಷ್ಟು ಹೆಚ್ಚಾಗಿ ೯೩ ಸಾವಿರದ ೩೧೭ ರೂ.ಗಳಲ್ಲಿ ವಹಿವಾಟು ನಡೆಸಿತು. ಏತನ್ಮಧ್ಯೆ, ಡಾಲರ್ ಸೂಚ್ಯಂಕವು ಸುಮಾರು ೦.೩ ಪ್ರತಿಶತದಷ್ಟು ಕುಸಿದು ಚಿನ್ನದ ಬೆಲೆಯನ್ನು ಬೆಂಬಲಿಸಿತು. ಯುಎಸ್ ಡಾಲರ್‌ನಲ್ಲಿನ ಕುಸಿತವು ಇತರ ಕರೆನ್ಸಿಗಳಲ್ಲಿ ಚಿನ್ನವನ್ನು ಅಗ್ಗವಾಗಿಸಿ ಅದರ ಬೇಡಿಕೆಯನ್ನು ಹೆಚ್ಚಿಸುತ್ತದೆ.

*************

ಮುಂಬೈ ಷೇರು ಮಾರುಕಟ್ಟೆಯಲ್ಲಿಂದು ಆರಂಭಿಕ ವಹಿವಾಟಿನಲ್ಲಿ ಷೇರು ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ೮೮ ಅಂಕಗಳ ಇಳಿಕೆಯೊಂದಿಗೆ ೮೨ ಸಾವಿರದ ೨೪೧ ವಹಿವಾಟು ನಡೆಸಿದೆ. ಅಂತೆಯೇ ನಿಫ್ಟಿ ಕೂಡ ೧೭ ಅಂಕಗಳ ಇಳಿಕೆಯ ನಂತರ ೨೫ ಸಾವಿರದ ೦೩ ರಲ್ಲಿ ವಹಿವಾಟು ನಡೆಸಿತ್ತು. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಪ್ರತಿ ಅಮೆರಿಕ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ೧೬ ಪೈಸೆ ಏರಿಕೆಯೊಂದಿಗೆ ೮೫ ರೂಪಾಯಿ ೪೧ ಪೈಸೆಯಷ್ಟಿದೆ.

*************

ಉತ್ತರಪ್ರದೇಶದ ಸಂಭಾಲ್ ಜಿಲ್ಲೆಯ ಜಾಮಾ ಮಸೀದಿ ಮತ್ತು ಹರಿಹರ ಮಂದಿರದ ನಡುವೆ ನಡೆಯುತ್ತಿರುವ ವಿವಾದದ ಕುರಿತು ಅಲಹಾಬಾದ್ ಹೈಕೋರ್ಟ್ ಇಂದು ತನ್ನ ತೀರ್ಪನ್ನು ಪ್ರಕಟಿಸಲಿದೆ. ಮಸೀದಿ ಸಮಿತಿ ಸಲ್ಲಿಸಿದ ಸಿವಿಲ್ ಪರಿಷ್ಕರಣಾ ಅರ್ಜಿಯ ಕುರಿತು ಹೈಕೋರ್ಟ್ ಇಂದು ಮಧ್ಯಾಹ್ನ ೨ ಗಂಟೆಗೆ ತನ್ನ ತೀರ್ಪು ನೀಡಲಿದೆ. ನ್ಯಾಯಮೂರ್ತಿ ರೋಹಿತ್ ರಂಜನ್ ಅಗರವಾಲ್ ಅವರ ಏಕ ಸದಸ್ಯ ಪೀಠವು ಇಂದು ಮಧ್ಯಾಹ್ನ ತೀರ್ಪು ಪ್ರಕಟಿಸಲಿದೆ. ಸಂಭಾಲ್ ಸಿವಿಲ್ ನ್ಯಾಯಾಲಯದ ಸರ್ವೇ ಆದೇಶಕ್ಕೆ ಕಾರಣವಾದ ಮೊಕದ್ದಮ್ಮೆಯ ನಿರ್ವಹಣೆಯನ್ನು ಪ್ರಶ್ನಿಸಿ ಜಾಮಾ ಮಸೀದಿ ನಿರ್ವಹಣಾ ಸಮಿತಿಯು ಸಿವಿಲ್ ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸಿತ್ತು.

*************

ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮ ನಿನ್ನೆ ಕೊನೆ ಗೊಂಡಿದೆ ಎಂಬ ವದಂತಿಗಳನ್ನು ಭಾರತೀಯ ಸೇನೆ ಅಧಿಕೃತವಾಗಿ ತಿರಸ್ಕರಿಸಿದೆ. ಭಾರತೀಯ ಸೇನೆಯ ಮಾಹಿತಿ ಪ್ರಕಾರ ಮೇ ೧೮ ರಂದು ಎರಡೂ ದೇಶಗಳ ಮಿಲಿಟರಿ ಕಾರ್ಯಾಚರಣೆಗಳ ಮಹಾ ನಿರ್ದೇಶಕರು - ಡಿಜಿಎಂಒ

ಮಟ್ಟದ ಯಾವುದೇ ಮಾತುಕತೆಗಳು ನಿಗದಿಯಾಗಿರಲಿಲ್ಲ. ಮೇ ೧೨ರಂದು ನಡೆದ ಡಿಜಿಎಂಒ ಗಳ ಸಂವಾದದಲ್ಲಿ ನಿರ್ಧರಿಸಿದಂತೆ ಯುದ್ಧ ವಿರಾಮದ ಮುಂದುವರಿಕೆ ಮತ್ತು ಅದರ ಮುಕ್ತಾಯದ ಬಗೆಗೆ ಯಾವುದೇ ದಿನಾಂಕವನ್ನು ನಿಗದಿಪಡಿಸಿಲ್ಲ ಎಂದು ಭಾರತೀಯ ಸೇನೆ ತಿಳಿಸಿದೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಡಿಜಿಎಂಒ ಮಟ್ಟದ ಕೊನೆಯ ಮಾತುಕತೆಗಳು ಇದೇ ೧೨ ರಂದು ಜರುಗಿದ್ದವು. ಮಾತುಕತೆಯ ಸಮಯದಲ್ಲಿ ಎರಡೂ ಕಡೆಯವರು ಪರಸ್ಪರ ನಡುವೆ ಯಾವುದೇ ಆಕ್ರಮಣಕಾರಿ ಮತ್ತು ಪ್ರತಿಕೂಲ ಕ್ರಮ ಪ್ರಾರಂಭಿಸಬಾರದು ಎಂಬುದರ ಬಗ್ಗೆ ಬದ್ಧತೆಯನ್ನು ಮುಂದುವರೆಸುವ ವಿಷಯಗಳನ್ನು ಚರ್ಚಿಸಲಾಗಿತ್ತು.

*************

ಭಾರತದ ಕರಾವಳಿ ಕಾವಲು ಪಡೆಯು, ಅಳಿವಿನ ಅಂಚಿನಲ್ಲಿರುವ ಓಲಿವ್ ರಿಡ್ಲಿ ಆಮೆಗಳನ್ನು ರಕ್ಷಿಸುವ ಮೂಲಕ ರಾಷ್ಟ್ರದ ಸಮುದ್ರ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಲು ಆಪರೇಷನ್ ಒಲಿವಿಯಾವನ್ನು ಆರಂಭಿಸಿದೆ. ದೇಶದ ಪೂರ್ವ ಕರಾವಳಿ, ಗಹಿರ್ಮಾತಾ ಬಂದರು ಸೇರಿದಂತೆ ಒಡಿಶಾ ಪ್ರದೇಶಗಳು ಈ ಆಮೆ ಪ್ರಭೇಧ ಗೂಡುಕಟ್ಟುವ ಪ್ರಮುಖ ಸ್ಥಳಗಳಾಗಿವೆ. ವಾರ್ಷಿಕ ಸುಮಾರು ೮ ಲಕ್ಷ ಆಮೆಗಳು ಇಲ್ಲಿಗೆ ಆಗಮಿಸುತ್ತವೆ. ಅಕ್ರಮ ಮೀನುಗಾರಿಕೆ, ಆವಾಸಸ್ಥಾನದ ಅವನತಿಯಿಂದ ಸಂಕಷ್ಟದಲ್ಲಿ ಸಿಲುಕಿರುವ ಇವುಗಳ ಉಳಿವನ್ನು ಖಚಿತಪಡಿಸಿಕೊಳ್ಳಲು, ರಕ್ಷಣಾ ಕಾರ್ಯಾಚರಣೆ ಅವಶ್ಯಕವಾಗಿದೆ.

*************

ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆಯ ಹಿನ್ನೆಲೆಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ - ಬಿಸಿಸಿಐ ಏಷ್ಯನ್ ಕ್ರಿಕೆಟ್ ಕೌನ್ಸಿಲ್ - ಎಸಿಸಿ ಯ ಎರಡು ಪ್ರಮುಖ ಪಂದ್ಯಾವಳಿಗಳಿಂದ ಹಿಂದೆ ಸರಿಯಲು ನಿರ್ಧರಿಸಿದೆ. ಮುಂದಿನ ತಿಂಗಳು ಶ್ರೀಲಂಕಾದಲ್ಲಿ ನಡೆಯಲಿರುವ ಮಹಿಳಾ ಉದಯೋನ್ಮುಖ ತಂಡಗಳ ಏಷ್ಯಾಕಪ್ ಮತ್ತು ಸೆಪ್ಟೆಂಬರ್‌ನಲ್ಲಿ ಭಾರತ ಆಯೋಜಿಸಲಿರುವ ಪುರುಷರ ಏಷ್ಯಾಕಪ್ ಪಂದ್ಯಾವಳಿಗಳಲ್ಲಿ ಭಾಗವಹಿಸದಿರಲು ನಿರ್ಧರಿಸಲಾಗಿದೆ. ಈ ನಿರ್ಧಾರವು ಈಗ ಭಾರತ, ಪಾಕಿಸ್ತಾನ್, ಬಾಂಗ್ಲಾದೇಶ, ಅಫ್ಗಾನಿಸ್ತಾನ ಮತ್ತು ಶ್ರೀಲಂಕಾ ತಂಡಗಳನ್ನು ಒಳಗೊಂಡ ಪುರುಷರ ಏಷ್ಯಾಕಪ್ ಪಂದ್ಯಾವಳಿಯ ಕಾರ್ಯ ಸಾಧ್ಯತೆಯ ಬಗೆಗೆ ಪ್ರಶ್ನೆಗಳನ್ನು

ಹುಟ್ಟು ಹಾಕಿದೆ. ಪ್ರಸ್ತುತ ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಅಧ್ಯಕ್ಷರೂ ಆಗಿರುವ ಆಂತರಿಕ ಸಚಿವ ಮೊಹ್ಸಿನ್ ನಖ್ವಿ ನೇತೃತ್ವದ ಎಸಿಸಿ ಈಗ ಸವಾಲನ್ನು ಎದುರಿಸುತ್ತಿದೆ. ಭಾರತ ತಂಡದ ಭಾಗವಹಿಸುವಿಕೆ ಪಂದ್ಯಾವಳಿಯ ವಾಣಿಜ್ಯ ಯಶಸ್ಸಿಗೆ ನಿರ್ಣಯಕ ಅಂಶವಾಗಿದ್ದು, ಪುರುಷರ ಏಷ್ಯಾಕಪ್‌ನಲ್ಲಿ ಬಿಸಿಸಿಐ ಅನುಪಸ್ಥಿತಿ ಪರಣಾಮಕಾರಿಯಾಗಿರಲಿದೆ. ಇದು ಎಲ್ಲಾ ಪಾಲುದಾರ ದೇಶಗಳ ಮೇಲೆ ಪರಿಣಾಮ ಬೀರುತ್ತದೆ.

*************

ಲಕ್ನೋದ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡ, ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಸೆಣಸಲಿದೆ. ಪಂದ್ಯ ಸಂಜೆ ೭:೩೦ ಕ್ಕೆ ಆರಂಭವಾಗಲಿದೆ. ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡ, ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ೧೦ ವಿಕೆಟ್‌ಗಳಿಂದ ಸೋಲಿಸಿದೆ. ಈ ಗೆಲುವಿನೊಂದಿಗೆ, ಗುಜರಾತ್ ಟೈಟಾನ್ಸ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವುದರೊಂದಿಗೆ ಪ್ಲೇಆಫ್‌ಗೆ ಅರ್ಹತೆ ಪಡೆಯಿತು. ಇದಲ್ಲದೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಕೂಡ ಪ್ಲೇಆಫ್ ಹಂತಕ್ಕೆ ತಲುಪಿವೆ. ೪ ನೇ ಸ್ಥಾನಕ್ಕಾಗಿ ಹೋರಾಟ ಮುಂದುವರೆದಿದೆ.

*******END******